ಅಸಲ ದಾವಾ ನಂ.358/2011
ಡಿ.ಡಬ್ಲ್ಯೂ-2.

ದಿನಾಂಕ**: 09-06-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ವಾದಿ ಪರ ವಕೀಲರಿಂದ**

1. ದಾವಾದ ಜಮೀನುಗಳ ಕನ್ಸಾಲಿಡೇಷನ್ ಆಗುವುದಕ್ಕಿಂತ ಪೂರ್ವದಲ್ಲಿ ಅದರ ಏನು ಸರ್ವೆ ನಂಬರ್ ಇತ್ತು ಎಂದರೆ ಸರ್ವೆ ನಂ.292 ಕ್ಕೆ 175 ಎಂದು ಇತ್ತು. ಸರ್ವೆ ನಂ.296 ಕ್ಕೆ 188 ಎಂದು ಇತ್ತು. ನಾನು ಸಮಾಜ ಕಲ್ಯಾಣ ಇಲಾಖೆಯಲ್ಲಿ ಕ್ಲರ್ಕ್ ಆಗಿ ನಿವೃತ್ತಿ ಹೊಂದಿರುತ್ತೇನೆ. ಮುಲ್ಲಾಳಿಕೆ ಎಂದರೆ ಏನು ಎಂದರೆ ಸಾಕ್ಷಿಯು ನಮ್ಮ ಹಿರಿಯರಿಂದ ಬಂದಿದ್ದು, ಜಮೀನು ಎಂದು ಆಗುತ್ತದೆ. ಇವೆರಡು ಜಮೀನುಗಳು ಮೂಲತಃ ಹುಸೇನಬಿ ಗಂ. ಮಿರ್ಜಾಬಿ ಮುಲ್ಲಾ ರವರಿಗೆ ಸೇರಿತ್ತು ಎಂದರೆ ಸರಿ. ಹುಸೇನಬಿ ಗಂ. ಮಿರ್ಜಾಬಿ ಮುಲ್ಲಾ ಇವರಿಗೆ ಖಾತುನಬಿ ಎಂಬ ಒಬ್ಬಳೇ ಮಗಳು ಎಂದರೆ ಸಾಕ್ಷಿಯು ಅವರಿಗೆ ಮಕ್ಕಳು ಇಲ್ಲ ಎಂದು ಉತ್ತರಿಸುತ್ತಾರೆ. ಖಾತುನಬಿಗೆ ಮತ್ತು ನಮಗೆ ಸಂಬಂಧಾನೆ ಇಲ್ಲ. ಖಾತುನಬಿ ಗಂ. ಹುಸೇನಸಾಬ ದಫೇದಾರ ಎಂದರೆ ನನಗೆ ಪರಿಚಯವಿಲ್ಲ ಎಂದು ಉತ್ತರಿಸುತ್ತಾರೆ. ನನ್ನ ಮುಖ್ಯವಿಚಾರಣೆ ಪ್ರಮಾಣಪತ್ರಕ್ಕೆ ನಾನೇ ಮಾಹಿತಿಯನ್ನು ಹೇಳಿ ಬರೆಸಿರುತ್ತೇನೆ. ಆದರೆ, ಟೈಪ್ ತಪ್ಪಾಗಿರುತ್ತದೆ. ಅದರಲ್ಲಿ ಖಾತನುಬಿರವರ ಬಗ್ಗೆ ಬರೆದಿರುವುದು ಟೈಪ್ ನಿಂದ ತಪ್ಪಾಗಿರುತ್ತದೆ. ಖಾತುನಬಿ

ಹುಸೇನಬಿ ತೀರಿಕೊಂಡ ನಂತರ ವರದಿಯನ್ನು ಕೊಟ್ಟಿದ್ದಾಳೆ ಎಂದು ನಿಮ್ಮ ಮುಖ್ಯವಿಚಾರಣೆ ಪ್ರಮಾಣಪತ್ರದಲ್ಲಿ ಬರೆಸಿದ್ದೀರಾ ಎಂದರೆ ಹೌದು ಎಂದು ಉತ್ತರಿಸುತ್ತಾರೆ.

2. ಖಾತುನಬಿಗೆ ಎರಡು ಗಂಡು ಮತ್ತು ಎರಡು ಹೆಣ್ಣುಮಕ್ಕಳು ಎಂದು ನಿಮ್ಮ ಮುಖ್ಯವಿಚಾರಣೆ ಪ್ರಮಾಣಪತ್ರದಲ್ಲಿ ಬರೆದಿದ್ದೀರಿ ಎಂದರೆ ಸರಿ. ಅವರ ಎರಡು ಗಂಡು ಮಕ್ಕಳ ಹೆಸರು ಏನು ಎಂದರೆ ಸಾಕ್ಷಿಯು ಅಸದಖಾನ, ನಬಿಸಾಬ, ಹುಸೇನಬಿ ಮತ್ತು ಮೈಬೂಬಿ ಎಂಬ ಮಕ್ಕಳು. ಅಸಾದಖಾನ ರವರ ಮಕ್ಕಳು ಎಂದರೆ ವಾದಿಯರು ಎಂದರೆ ಸರಿ. ನಬಿಲಾಲ ಹುಸೇನಸಾಬ ದಫೇದಾರ ಖಾತುನಬಿ ಮಗ ಎಂದರೆ ಸರಿ. ವಾದಿಯರು ಮತ್ತು 1 ರಿಂದ 6 ನೇ ಪ್ರತಿವಾದಿಯರು ಮೃತ ಖಾತನುಬಿ ರವರ ವಾರಸುದಾರರು ಎಂದರೆ ಸರಿ.

3. ಹುಸೇನಬಿ ಗಂ. ಮಿರ್ಜಾಬೇಗ ಮುಲ್ಲಾ ತೀರಿಕೊಂಡ ನಂತರ ಖಾತುನಬಿ ಗಂ. ಹುಸೇನಸಾಬ ದಫೇದಾರ ವಾರಸುದಾರರು ಆದರು ಎಂದರೆ ಸಾಕ್ಷಿಯು ಯಾಸೀನ್ ಖಾನ್ ಗೆ ವಾರಸುದಾರರು ಆದರು ಎಂದು ಉತ್ತರಿಸುತ್ತಾರೆ. ವಾದಿಯರು ಮತ್ತು 1 ರಿಂದ 6 ನೇ ಪ್ರತಿವಾದಿಯರು ಖಾತನುಬಿ ಗಂ. ಹುಸೇನಸಾಬ ದಫೇಪದಾರ ಇವರ ವಾಸುದಾರರಾಗಿರುವುದರಿಂದ ದಾವಾಸ್ತಿ ಅವರ

ಕಬ್ಜೆಯಲ್ಲಿ ಬಂತು ಎಂದರೆ ಸರಿಯಲ್ಲ.

4. ಯಾಸೀನ್ ಖಾನ್ ನನ್ನ ದೊಡ್ಡಪ್ಪನಾಗಬೇಕು. ಯಾಸಿನ್ ಖಾನ್ ನ ತಂದೆಯ ಹೆಸರು ನೂರದ್ದೀನ್ ಮುಲ್ಲಾ ಇರುತ್ತದೆ. ತಾಯಿಯ ಹೆಸರು ಜನ್ನತಬಿ ಮುಲ್ಲಾ ಇರುತ್ತದೆ.ಯಾಸೀನ್ ಖಾನ್ ನ ತಂದೆ ತಾಯಿ ಆತನು ಸಣ್ಣವನಿರುವಾಗ ತೀರಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಆತನು ಆಗ 10-12 ವರ್ಷ ವಯಸ್ಸು ಇತ್ತು ಎಂದು ಉತ್ತರಿಸುತ್ತಾರೆ. ಆಗ ಆತನಿಗೆ ನೋಡಿಕೊಳ್ಳುವವರು ಯಾರೂ ಇರಲಿಲ್ಲ, ಪರದೇಶಿ ಇದ್ದನು ಎಂದರೆ ಸಾಕ್ಷಿಯು ನಮ್ಮ ಅಜ್ಜ ನೂರುದ್ದೀನ್ ಇದ್ದರು ಎಂದು ಉತ್ತರಿಸುತ್ತಾರೆ. ಯಾಸೀನ್ ಖಾನ್ ನನ್ನು ನೋಡಿಕೊಳ್ಳುವವರು ಯಾರೂ ಇಲ್ಲ ಎಂದು ಖಾತುನಬಿ ಅವರಿಗೆ ಜೋಪಾನ ಮಾಡಿದ್ದಳು ಎಂದರೆ ಸರಿಯಲ್ಲ. ಯಾಸೀನ್ ಖಾನನಿಗೆ ಖಾತುನಬಿಯಾಗಲೀ, ಹುಸೇನಬಿಯಾಲೀ ಯಾವುದೇ ರಕ್ತ ಸಂಬಂಧವಿಲ್ಲ ಎಂದರೆ ಸಾಕ್ಷಿಯು ಹುಸೇನಬಿ ಮತ್ತು ಯಾಸೀನ್ ಖಾನ ರಕ್ತ ಸಂಬಂಧಿಕರು ಎಂದು ಉತ್ತರಿಸುತ್ತಾರೆ. ಹುಸೇನಬಿ ಮತ್ತು ಯಾಸೀನ್ ಖಾನ್ ರಕ್ತ ಸಂಬಂಧಿಕರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ಖಾತುನಬಿ ತೀರಿಕೊಂಡ ನಂತರ ಅವರ ವಾರಸುದಾರರಿಗೆ

ಗೊತ್ತಾಗದಂತೆ ಯಾಸೀನ್ ಖಾನ್ ತನ್ನ ಹೆಸರಿಗೆ ಆಸ್ತಿಯ ಪಟ್ಟಿ ಮಾಡಿಕೊಂಡ ಎಂದರೆ ಸರಿಯಲ್ಲ. ದಾದಿಬಿ ಮೈನುದ್ದೀನ್ ಖಾಜಿ ನನ್ನ ತಾಯಿಯಾಗಬೇಕು. ನನ್ನ ತಂದೆ ಮೈನುದ್ದೀನ್ ಖಾಜಿ ಪಿಎಸ್ಐ ಆಗಿ ಕೆಲಸ ಮಾಡುತ್ತಿದ್ದರು. ನಿಮ್ಮ ಮುಖ್ಯವಿಚಾರಣೆ ಪ್ರಮಾಣಪತ್ರದಲ್ಲಿ ಖಾತುನಬಿ ಮೃತವಾದ ನಂತರ ದಾವಾಸ್ತಿ ಅಸದ್‌ಖಾನ್ ನ ಹೆಸರು ಉತಾರೆಯಲ್ಲಿ ದಾಖಲಾಯಿತು ಎಂದರೆ ಸರಿಯಲ್ಲ. ದಾದಿಮಾ ಖಾಜಿ ಯವರಿಗೆ ಡ.ನಂಬರ್ 1902 ಬಿಟ್ಟುಕೊಟ್ಟಿದ್ದ ಎಂದು ಸುಳ್ಳು ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ದಾದಿಮಾ ಮೈನುದ್ದೀನ್ ಖಾಜಿಯ ಹೆಸರಿನಲ್ಲಿ ಆಸ್ತಿಗಳನ್ನು ಬಿಟ್ಟುಕೊಡುವ ಪೂರ್ವದಲ್ಲಿ ಅಸಾದ್‌ಖಾನ್ ನ ಹೆಸರು ಉತಾರೆಯಲ್ಲಿ ಎಂಟ್ರಿಯಾಗಿತ್ತು ಎಂದರೆ ಸಾಕ್ಷಿಯು ಎಂಟ್ರಿಯಾಗಿರಲಿಲ್ಲ, ಅಸಾದ್‌ಖಾನ್ ವರದಿ ಕೊಟ್ಟು ದಾದಿಬಿ ಯವರ ಹೆಸರಿಗೆ ಮಾಡಿಸಿಕೊಟ್ಟಿದ್ದಾನೆ ಎಂದು ಉತ್ತರಿಸುತ್ತಾರೆ. ಅಸಾದ್ ಖಾನ್ ಖಾತುನಬಿ ತೀರಿಕೊಂಡ ನಂತರ ದಾದಿಬಿಗೆ ದಾವಾದ ಆಸ್ತಿ ಬಿಟ್ಟುಕೊಟ್ಟಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾದಿಬಿ ಮತ್ತು ಅಸಾದ್‌ಖಾನ್ ನಿಗೆ ಯಾವುದೇ ರಕ್ತ ಸಂಬಂಧವಿರಲಿಲ್ಲ. ದಾದಿಬಿ ಮತ್ತು ಅಸಾದ್ ಖಾನ್ ನಿಗೆ ಯಾವುದೇ ರಕ್ತ

ಸಂಬಂಧವಿಲ್ಲದ್ದರಿಂದ ದಾವಾದ ಆಸ್ತಿಗಳನ್ನು ದಾದಿಬಿ ಬಿಟ್ಟುಕೊಡುವ ಪ್ರಶ್ನೆಯೇ ಬರುವುದಿಲ್ಲ ಎಂದರೆ ಅಸಾದ್‌ಖಾನ್ ನ ತಾಯಿ ಖಾತುನಬಿ ತೀರಿಕೊಂಡ ನಂತರ ಆತನೇ ವರದಿ ಕೊಟ್ಟು ದಾದಿಬಿಯ ಹೆಸರು ಮಾಡಿದ್ದಾನೆ ಎಂದು ಉತ್ತರಿಸುತ್ತಾರೆ. ಹುಸೇನಬಿ ತೀರಿಕೊಂಡ ನಂತರ ಖಾತುನಬಿ ಖೊಟ್ಟಿಯಾಗಿ ಎಂಟ್ರಿ ಮಾಡಿಕೊಂಡಿದ್ದಾಳೆ ಮತ್ತು ಖಾತನುಬಿ ತೀರಿಕೊಂಡ ನಂತರ ಅಸಾದ್ ಖಾನ್ ಖೊಟ್ಟಿಯಾಗಿ ಎಂಟ್ರಿ ಮಾಡಿಕೊಂಡಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ನಮ್ಮ ತಂದೆ ಪಿಎಸ್‌ಐ ಆಗಿದ್ದರಿಂದ, ಅದರ ಉಪಯೋಗ ಪಡೆದುಕೊಂಡು ರೆವೆನ್ಯೂ ಇಲಾಖೆಯವರ ಮೇಲೆ ಒತ್ತಾಯ ಮಾಡಿ ಡ.ನಂ.1902 ವನ್ನು ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ.

7. ಲಾಡಬೇಗ ಮಿರ್ಜಾಬೇಗ ಮುಲ್ಲಾ ಅಸಲ ದಾವಾ ನಂ.35/1978 ಮಾಡಿದ್ದರು ಎಂದರೆ ಸರಿ. ಸದರಿ ದಾವೆಯನ್ನು ಐದು ಸರ್ವೆ ನಂಬರ್ ಗಳ ಮೇಲೆ ಯಾಸೀನ್ ಖಾನ್ ನ ಮೇಲೆ ಮಾಡಿದ್ದರು. ಸದರಿ ದಾವೆಯಲ್ಲಿ ಖಾತುನಬಿಯನ್ನು ಪ್ರತಿವಾದಿಯನ್ನಾಗಿ ಮಾಡಿದ್ದರು. ಸದರಿ ದಾವೆಯನ್ನು

ಪಾಲುವಾಟ್ನಿಗಾಗಿ ಮಾಡಿದ್ದರು. ಸದರಿ ದಾವೆ ಏನು ಆಯಿತು ಎಂದರೆ ಸಾಕ್ಷಿಯು ಸದರಿ ದಾವೆಯು ವಜಾಗೊಂಡಿರುತ್ತದೆ.

8. ನಮ್ಮ ತಾಯಿ ದಾದಿಬಿ ಮೈನುದ್ದೀನ್ ಖಾಜಿ ದಾವಾಸ್ತಿಯನ್ನೆಲ್ಲಾ ರೈತನಾತೆಯಿಂದ ಸಾಗುವಳಿ ಮಾಡಿದ್ದರು. ರೈತನಾತೆಯಿಂದ 1956 ರಿಂದ 1999 ರವರೆಗೆ ಸಾಗುವಳಿ ಮಾಡಿರುತ್ತಾರೆ. ಡ.ನಂಬರ್ 1902 ಆದ ಸಮಯದಲ್ಲಿ ನಮ್ಮ ತಾಯಿ ರೈತನಾತೆಯಿಂದ ಸಾಗುವಳಿ ಮಾಡುತ್ತಿದ್ದರು. ನಿಮ್ಮ ತಾಯಿ ಸಾಗುವಳಿ ಮಾಡುತ್ತಿದ್ದಾರೆ ಎಂದು ಉತಾರೆಯಲ್ಲಿ ಏನಾದರೂ ಎಂಟ್ರಿಯಾಗಿತ್ತಾ ಎಂದರೆ ಸಾಕ್ಷಿಯು ಇದೆ ಎಂದು ಉತ್ತರಿಸುತ್ತಾರೆ. ಪಾರಂ ನಂ.7 ರಲ್ಲಿ ಯಾರನ್ನು ಮಾಲೀಕರಾಗಿ ತೋರಿಸಿದ್ದರು ಎಂದರೆ ಸಾಕ್ಷಿಯು ಯಾಸೀನ್ ಖಾನ್ ನಿಗೆ ಎಂದು ಉತ್ತರಿಸುತ್ತಾರೆ. ಅಸಾದ್ ಖಾನ್ ನಿಮ್ಮ ತಾಯಿಗೆ ಜಮೀನುಗಳನ್ನು ಬಿಟ್ಟುಕೊಟ್ಟಿದ್ದರು, ಮತ್ತೇ ಯಾವ ಕಾರಣಕ್ಕೆ ಪಾರಂ ನಂ.7 ತುಂಬುವ ಪ್ರಶ್ನೆ ಬಂತು ಎಂದರೆ ಅರ್ಧ ಜಮೀನನ್ನು ನಮ್ಮ ತಾಯಿಯ ಹೆಸರಿಗೆ ಪಾರಂ ನಂ.7 ಅನ್ನು ತುಂಬಿದ್ದರು.

ಅಸಲ ದಾವಾ ನಂ.358/2011
ಡಿ.ಡಬ್ಲ್ಯೂ-2.

**ವಾದಿ ಪರ ವಕೀಲರ ಕೋರಿಕೆ ಮೇರೆಗೆ ಸಾಕ್ಷಿಯ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

ಹೆಚ್ಚುವರಿ ಹಿರಿಯ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ.